**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ಎಲ್ ಅನಿಲ್ ಕುಮಾರ್ ಇವರು ನಿಯಮ-330 ರಡಿ ನೀಡಿರುವ ಸೂಚನೆಗೆ ಮಾಹಿತಿ**

**ಸೂಚನೆ**

"ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿ), ಕೋಲಾರ ಬ್ಯಾಂಕಿನಲ್ಲಿ ಸಾರ್ವಜನಿಕ ಠೇವಣಿ ಇದ್ದು ಹಾಗೂ ನಬಾರ್ಡ್ ಮತ್ತು ಅಪೆಕ್ಸ್ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡು ಬ್ಯಾಂಕಿನಿಂದ ಕೆ.ಸಿ.ಸಿ. ಸಾಲ,ಇತರೆ ಸಾಲ ಮತ್ತು ಸ್ವ-ಸಹಾಯ ಸಂಘಗಳಿಗೆ ಸಾಲವನ್ನು ಸರ್ಕಾರದ ನಿಯಮಾನುಸಾರ ನೀಡದೆ ಮತ್ತು ಸರ್ಕಾರದ ನಿಯಮಾನುಸಾರ ಬಡ್ಡಿ ಸಹಾಯಧನದ ಕ್ಲೇಂ ಅನ್ನು ಮಾಡದೇ 2017-18ರಿಂದ 2023-24ರ ಅವಧಿಯಲ್ಲಿ ನಡೆದ ವಂಚನೆ ಮತ್ತು ಹಣ ದುರುಪಯೋಗದ ಪ್ರಕರಣಗಳು ಬೆಳಕಿಗೆ ಬಂದಿದ್ದು, ಈ ಬಗ್ಗೆ ಇಲಾಖೆಯಿಂದ ತನಿಖೆಗೆ ಆದೇಶ ಮಾಡಿದ್ದಲ್ಲಿ ಇದರ ಮೇಲೆ ಮಾನ್ಯ ಹೈಕೋರ್ಟ್‌ನಲ್ಲಿ ರಿಟ್ ದಾಖಲಿಸಿ ಮಧ್ಯಂತರ ಆದೇಶ ಪಡೆದುಕೊಳ್ಳುತ್ತಾ ಬರುತ್ತಿದ್ದು, ಸುಮಾರು 20ಕ್ಕಿಂತ ಹೆಚ್ಚು ರಿಟ್ ಅರ್ಜಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದು, ಇವೆಲ್ಲವೂ ಬಹುಕೋಟಿ ಹಗರಣವಾಗಿದ್ದು, ಡಿಸಿಸಿ ಬ್ಯಾಂಕ್, ಕೋಲಾರ ಇದರಲ್ಲಿ ನಡೆದಿರುವ 2017-18 ರಿಂದ 2023-24ರ ಅವಧಿಯ ಸರ್ಕಾರದ ನಿಯಮ ಮೀರಿ ನಡೆದಿರುವ ಸಾಲ ವಿತರಣೆ ಮತ್ತು ಸರ್ಕಾರದ ಸಹಾಯಧನ ಕ್ಲೇಂನಲ್ಲಿನ ಅವ್ಯವಹಾರ ಮತ್ತು ಹಣದುರುಪಯೋಗ ಪ್ರಕರಣಗಳನ್ನು ಪಾರದರ್ಶಕ ಹಾಗೂ ತ್ವರಿತ ತನಿಖೆ ಮಾಡಲು ಪ್ರತ್ಯೇಕ ತನಿಖಾ ತಂಡವನ್ನು ರಚಿಸಿ ಅಥವಾ ಲೋಕಾಯುಕ್ತದಿಂದ ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಶಿಸ್ತು, ಕ್ರಿಮಿನಲ್ ಮತ್ತು ಸಿವಿಲ್ ಕ್ರಮ ಕೈಗೊಂಡು ವಂಚನೆಯಾಗಿರುವ ಸಾರ್ವಜನಿಕ ಹಣವನ್ನು ವಸೂಲಾತಿ ಮಾಡಿ ಬ್ಯಾಂಕಿನ ಆರ್ಥಿಕ ಸುಸ್ಥಿತಿಗೆ ಕ್ರಮವಹಿಸುವಂತೆ ಈ ಹಿಂದೆಯೂ ಸದನದಲ್ಲಿ ಪ್ರಸ್ತಾಪಿಸಿದಾಗ ಸೂಕ್ತ ಕ್ರಮ ಕೈಗೊಂಡು ಸರ್ಕಾರದ ಹಣವನ್ನು ವಸೂಲಾತಿ ಮಾಡುವುದಾಗಿ ಸದನಕ್ಕೆ ಮಾಹಿತಿ ನೀಡಿದ್ದರೂ ಸಹ ಈವರೆಗೂ ಯಾವುದೇ ಕ್ರಮ ಕೈಗೊಳ್ಳದೆ ಇರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಬಳಿ ಪ್ರಸ್ತಾಪಿಸುವ ಬಗ್ಗೆ."

**ಉತ್ತರ:**

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ 12 ಶಾಖೆಗಳನ್ನು ಮತ್ತು ಒಂದು ವಿಸ್ತರಣಾ ಶಾಖೆಯನ್ನು ಹೊಂದಿದ್ದು, ವಿವಿಧ ದರ್ಜೆಯ 110 ಸಿಬ್ಬಂದಿಗಳು ಬ್ಯಾಂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 2017-18 ರಿಂದ 2023-24ರ ಅವಧಿಯಲ್ಲಿ ಬ್ಯಾಂಕಿನ ಹಣಕಾಸಿನ ವಿವರ ಈ ಕೆಳಕಂಡಂತಿರುತ್ತದೆ.

(ರೂ.ಕೋಟಿಗಳಲ್ಲಿ)

| ಕ್ರ ಸಂ | ವಿವರ | 2017–18 | 2018–19 | 2019–20 | 2020–21 | 2021–22 | 2022–23 | 2023–24 | 2024–25 |
|---|---|---|---|---|---|---|---|---|---|
| 1 | ಷೇರು ಬಂಡವಾಳ | 65.89 | 73.18 | 83.75 | 105.51 | 117.99 | 134.42 | 134.98 | 132.21 |
| 2 | ನಿಧಿಗಳು | 20.44 | 22.34 | 22.61 | 26.07 | 25.49 | 25.14 | 23.64 | 32.45 |
| 3 | ಠೇವಣಿಗಳು | 206.04 | 277.50 | 310.24 | 357.35 | 441.99 | 496.60 | 402.97 | 339.86 |

| | | | | | | | | | |
|---|---|---|---|---|---|---|---|---|---|
| 4 | ಅಪೆಕ್ಸ್ ಬ್ಯಾಂಕಿನಿಂದ ಪಡೆದ ಸಾಲ | 544.70 | 531.84 | 717.00 | 891.25 | 932.24 | 1196.15 | 1089.99 | 970.59 |
| 5 | ಸಾಲಗಳ ವಿತರಣೆ | | | | | | | | |
| ಅ. | ಅಲ್ಪಾವಧಿ ಬೆಳೆಸಾಲ | 244.23 | 266.55 | 348.45 | 425.42 | 503.33 | 605.56 | 655.81 | 624.53 |
| ಆ. | ಮಧ್ಯಮಾವಧಿ ಕೃಷಿ ಸಾಲ | 22.68 | 14.34 | 26.51 | 37.23 | 29.21 | 24.46 | 11.82 | 4.78 |
| ಇ. | ಮಧ್ಯಮಾವಧಿ ಎಸ್.ಹೆಚ್.ಜಿ ಸಾಲ | 434.36 | 176.41 | 403.16 | 315.21 | 332.92 | 608.99 | 22.88 | 0.00 |
| ಈ. | ದೀರ್ಘಾವಧಿ ಗೃಹ ಸಾಲ | 12.51 | 6.34 | 6.07 | 18.51 | 10.88 | 3.48 | 1.72 | 1.09 |
| ಉ. | ಇತರೆ ಸಾಲ | 13.60 | 11.20 | 11.40 | 19.97 | 22.20 | 30.62 | 31.43 | 39.77 |
| | **ಒಟ್ಟು** | **727.38** | **474.84** | **795.59** | **816.34** | **898.54** | **1273.11** | **723.66** | **670.17** |

<u>ಹಣಕಾಸು ವರ್ಷ 2017-18 ರಿಂದ 2023-24ನೇ ಅವಧಿಯಲ್ಲಿ ನಡೆದಿರುವ ವಂಚನೆ / ಹಣ ದುರುಪಯೋಗದ ಪ್ರಕರಣಗಳು ಮತ್ತು ಅವುಗಳ ಮೇಲೆ ನಿಯಮಾನುಸಾರ ತೆಗೆದುಕೊಂಡಿರುವ ಕ್ರಮಗಳ ವರ್ಷಾವಾರು ವಿವರ ಈ ಕೆಳಗಿನಂತಿದೆ.</u>

**ಪ್ರಕರಣ-1:** 2016-17 ರಿಂದ 2020-21ನೇ ಸಾಲಿನವರೆಗೆ ವಿತರಿಸಿರುವ ಸ್ವ-ಸಹಾಯ ಗುಂಪುಗಳ ಸಾಲಗಳ ಮೇಲಿನ ಬಡ್ಡಿ ಸಹಾಯಧನ ಕ್ಲೈಂ ಬಿಲ್ಲುಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಡಿ ಪರಿವೀಕ್ಷಣೆಗೆ ದಿನಾಂಕ:18.11.2021 ರಂದು ಆದೇಶವಾಗಿದ್ದು, ಶ್ರೀ ಎಸ್.ಜಿ.ಮಂಜುನಾಥ್ ಸಿಂಗ್, ಸಹಕಾರ ಸಂಘಗಳ ಉಪ ನಿಬಂಧಕರನ್ನು ಪರಿವೀಕ್ಷಣಾಧಿಕಾರಿಯಾಗಿ ನೇಮಿಸಲಾಗಿತ್ತು. ಸದರಿಯವರು ಪರಿವೀಕ್ಷಣೆ ನಡೆಸಿ ವರದಿಯನ್ನು ದಿನಾಂಕ:31.05.2023 ರಂದು ಸಲ್ಲಿಸಿದ್ದು, ಸರ್ಕಾರದಿಂದ ಒಟ್ಟಾರೆ ರೂ.9,64,187/-ಬಡ್ಡಿ ಸಹಾಯಧನ ಕಡಿಮೆ ಕ್ಲೈಂ ಮಾಡಿರುವುದಾಗಿ, ಸದರಿ ಮೊತ್ತವನ್ನು ಸಂಬಂಧಪಟ್ಟ ಸಿಬ್ಬಂದಿಗಳಿಂದ ವಸೂಲಿ ಮಾಡಬೇಕಾಗಿ ಅಭಿಪ್ರಾಯ ಪಟ್ಟಿರುತ್ತಾರೆ. ಅದರಂತೆ ದಿನಾಂಕ:31.07.2023 ರಂದು ಹೊರಡಿಸಿದ ಕಲಂ 68 ರ ನಿರ್ದೇಶನವನ್ನು ಪಾಲನೆ ಮಾಡಿ ಕಡಿಮೆ ಮೊತ್ತದ ಬಡ್ಡಿ ಕ್ಲೈಂ ಮಾಡಲು ಕಾರಣರಾದ ಸಿಬ್ಬಂದಿಗಳಿಂದ ಸದರಿ ಮೊತ್ತದ ಮೇಲೆ ಶೇ.12 ರಷ್ಟು ಬಡ್ಡಿ ದರದಲ್ಲಿ ಬಡ್ಡಿ ಆಕರಣೆ ಮಾಡಿ ವಸೂಲಿ ಮಾಡಲಾಗಿದೆ. ಮುಂದುವರೆದು ಶಿಸ್ತು ಕ್ರಮವಾಗಿ ಎಚ್ಚರಿಕೆ ನೋಟೀಸ್ ನೀಡಲಾಗಿದೆ ಎಂದು ಬ್ಯಾಂಕಿನಿಂದ ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ಇದೇ ಆರೋಪ ಅಂಶಕ್ಕೆ ಮಾನ್ಯ ಲೋಕಾಯುಕ್ತರಲ್ಲಿ ದೂರು ಸಂಖ್ಯೆ: ಉಪ ಲೋಕ/ಬಿಡಿ-3330/2022 ರನ್ವಯ ದಾಖಲಾಗಿದ್ದು, ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ.

**ಪ್ರಕರಣ-2:** 2018-19ನೇ ಸಾಲಿನ ಹಣಕಾಸು ವರ್ಷದಲ್ಲಿ ಸರ್ಕಾರ ಘೋಷಿಸಿದ ರೂ.1.00 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲ ಮನ್ನಾ ಯೋಜನೆಯಡಿ, ಕೋಲಾರ ಮತ್ತು

ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕಿನ ಚಿಂತಾಮಣಿ ಶಾಖೆಯಲ್ಲಿ ನಡೆದಿದೆ ಎನ್ನಲಾದ ರೂ.11 ಕೋಟಿ ಸಾಲ ಮನ್ನಾ ವಂಚನೆಯ ಆರೋಪದ ಬಗ್ಗೆ, ಬ್ಯಾಂಕಿನ ಕೇಂದ್ರ ಕಛೇರಿಯ ಅಧಿಕಾರಿಗಳಿಂದ ಆಂತರಿಕ ಪರಿವೀಕ್ಷಣೆ ನಡೆಸಲಾಗಿದ್ದು, ಸರ್ಕಾರದಿಂದ ಸಾಲ ಮನ್ನಾ ಯೋಜನೆಯಡಿ ಬಿಡುಗಡೆಯಾದ ಹಣ, ಬ್ಯಾಂಕಿನ ಲೆಕ್ಕ ಖಾತೆಗಳಿಗೆ ಹೊಂದಾಣಿಕೆ ಮಾಡುವಲ್ಲಿ ದುರ್ಬಳಕೆಯಾಗಿರುವುದು ವರದಿಯಾಗಿರುತ್ತದೆ. ದುರ್ಬಳಕೆಯಾದ ಮೊತ್ತ ರೂ.993.62 ಲಕ್ಷಗಳನ್ನು ಆಡಳಿತ ಮಂಡಳಿ ತೀರ್ಮಾನದಂತೆ ಶೇ.6ರ ದರದಲ್ಲಿ ಬಡ್ಡಿ ಮೊತ್ತ ರೂ.32.95ಲಕ್ಷಗಳೊಂದಿಗೆ ಈ ಕೆಳಕಂಡ ಸಹಕಾರ ಸಂಘಗಳಿಂದ ಬ್ಯಾಂಕಿಗೆ ಜಮಾ ಪಡೆಯಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಸಹಕಾರ ಸಂಘದ ಹೆಸರು | ಕೃತಕ ಖರ್ಚು ತೋರಿಸಿ ಸಂಘಗಳ ಚಾಲ್ತಿ ಖಾತೆಗೆ ಜಮಾ ಮಾಡಿ ದುರ್ಬಳಕೆ ಆಗಿರುವ ಮೊತ್ತ | ಶೇಕಡ 6 ರ ಬಡ್ಡಿ ದರದಲ್ಲಿ ಮರುಪಾವತಿಸಿದ ಬಡ್ಡಿ | ಒಟ್ಟು ಬ್ಯಾಂಕಿಗೆ ಜಮಾ ಬಂದ ಮೊತ್ತ |
|---|---|---|---|---|
| 1. | ಕುರುಬೂರು | 515.85 | 15.94 | 531.79 |
| 2. | ಯನಮಲಪಾಡಿ | 131.60 | 0.76 | 132.36 |
| 3. | ಯಗವಕೋಟೆ | 120.84 | 7.08 | 127.92 |
| 4. | ನಂದಿಗಾನಹಳ್ಳಿ | 36.00 | 0.17 | 36.17 |
| 5. | ಟಿ.ಗೊಲ್ಲಹಳ್ಳಿ | 32.13 | 0.20 | 32.33 |
| 6. | ಬೊಮ್ಮಪಲ್ಲಿ | 145.20 | 8.76 | 153.96 |
| 7. | ಹುಲಗುಮ್ಮನಹಳ್ಳಿ | 12.00 | 0.04 | 12.04 |
| | ಒಟ್ಟು | 993.62 | 32.95 | 1026.57 |

ಈ ಮೇಲಿನಂತೆ ದುರ್ಬಳಕೆಗೆ ಕಾರಣರಾದ ಚಿಂತಾಮಣಿ ಶಾಖೆಯ ಪ್ರಭಾರ ವ್ಯವಸ್ಥಾಪಕರಾದ ಶ್ರೀ ಜಿ.ಚಂದ್ರಶೇಖರ್ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದ್ದು ಇವರಿಗೆ ದಂಡನೆಯ ಶಿಕ್ಷೆ ವಿಧಿಸಿ ದಿನಾಂಕ:11.01.2021 ರಂದು ಹಿರಿಯ ಸಹಾಯಕರ ಹುದ್ದೆಯಿಂದ ಕಿರಿಯ ಸಹಾಯಕರ ಹುದ್ದೆಗೆ ಹಿಂಬಡ್ತಿ ನೀಡಲಾಗಿರುತ್ತದೆ.

ಇದೇ ಶಾಖೆಗೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತರ ಕಛೇರಿಗೂ ದೂರು ಅರ್ಜಿ ಸ್ವೀಕೃತಿಯಾಗಿದ್ದು, 2018-19ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದ ರೂ.1.00 ಲಕ್ಷ ಬೆಳೆ ಸಾಲ ಮನ್ನಾ ಯೋಜನೆಯಡಿ ರೈತರ ಕೃತಕ ಹೆಸರಿನಲ್ಲಿ ದಾಖಲೆಗಳನ್ನು ಸೃಷ್ಟಿಸಿ ರೂ.11,07,39,000/- ತಾತ್ಕಾಲಿಕವಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆಯೇ ಮತ್ತು ಎಸ್.ಬಿ.ಐ ಚಿಂತಾಮಣಿ ಶಾಖೆಯೊಂದಿಗೆ ನಡೆಸಿರುವ ವ್ಯವಹಾರದಲ್ಲಿ ರೂ.1,18,91,104/- ದುರುಪಯೋಗವಾಗಿದೆಯೇ ಎಂಬ ಆರೋಪದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65ರಡಿ ಶಾಸನಬದ್ಧ ಪರಿವೀಕ್ಷಣೆ ನಡೆಸಲು ಶ್ರೀ ಸುಂದರ್‌ರಾಜು ಜಿ.ಟಿ. , ಸಹಕಾರ ಅಭಿವೃದ್ಧಿ ಅಧಿಕಾರಿರವರನ್ನು ದಿನಾಂಕ:11-11-2024 ರಂದು ನೇಮಿಸಿ ಆದೇಶ ಹೊರಡಿಸಲಾಗಿದ್ದು ಪರಿವೀಕ್ಷಣೆ ಕಾರ್ಯ ಪ್ರಗತಿಯಲ್ಲಿರುತ್ತದೆ.

**ಪ್ರಕರಣ-3:** ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ನಿ., ಇದರ ಚಿಂತಾಮಣಿ ಶಾಖೆಯಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ ಭುವನ್ ಎಂಟರ್‌ಪ್ರೈಸಸ್ ನಿಂದ ಶಾಖೆಯ ಕಾರ್ಯವ್ಯಾಪ್ತಿಯ ಪ್ರಾಥಮಿಕ ಕೃಷಿ ಪತ್ತಿನ ಸೇವಾ ಸಹಕಾರ ಸಂಘಗಳೊಂದಿಗೆ ನಡೆಸಿರುವ ಹಣ ವರ್ಗಾವಣೆ ವ್ಯವಹಾರ ಮತ್ತು ಕೋಲಾರ ಶಾಖೆಯಲ್ಲಿ ಬಿ.ಎಸ್.ಎನ್.ಎಲ್ ನೌಕರರ ಪತ್ತಿನ ಸೇವಾ ಸಹಕಾರ ಸಂಘಕ್ಕೆ ದಿನಾಂಕ:30.11.2017 ರಂದು ಮಂಜೂರಾಗಿರುವ ರೂ.2.50 ಕೋಟಿ ನಗದು ನಂಬಿಕೆ ಸಾಲ ನಿಯಮ ಬಾಹಿರವಾಗಿ ಮಂಜೂರು ಮಾಡಿರುವ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರಿಂದ ದಿನಾಂಕ:04.01.2021 ರಲ್ಲಿ ಆದೇಶವಾಗಿದ್ದು ವಿಚಾರಣಾಧಿಕಾರಿಯಾಗಿ ಶ್ರೀ ಎಂ.ವಿ. ವೆಂಕಟೇಶ್ ಮೂರ್ತಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಬಳ್ಳಾಪುರ ಉಪ ವಿಭಾಗ ಇವರನ್ನು ನೇಮಿಸಿರುತ್ತಾರೆ. ಸದರಿಯವರು ಕಲಂ 64 ರ ವಿಚಾರಣೆ ನಡೆಸಿ , ವರದಿ ಸಲ್ಲಿಸಿದ್ದು ಬ್ಯಾಂಕಿನ ಚಿಂತಾಮಣಿ ಶಾಖೆಯ ಪ್ರಭಾರ ವ್ಯವಸ್ಥಾಪಕರಿಂದ ಕರ್ತವ್ಯಲೋಪ ಮತ್ತು ಅಧಿಕಾರ ದುರುಪಯೋಗವಾಗಿರುತ್ತದೆ ಎಂಬುದಾಗಿ ವರದಿ ಮಾಡಿರುತ್ತಾರೆ. ಈ ಸಂಬಂಧ ಕಲಂ 68 ರಡಿ ದಿನಾಂಕ:23-09-2022 ರಂದು ಆದೇಶ ಹೊರಡಿಸಿ ಬ್ಯಾಂಕ್ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಾಸನಬದ್ಧ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿಯ ನಿರ್ದೇಶನದಂತೆ ಪ್ರಭಾರ ವ್ಯವಸ್ಥಾಪಕರಾದ ಶ್ರೀ ಜಿ.ಚಂದ್ರಶೇಖರ್ ರವರಿಗೆ ಲಘು ದಂಡನಾ ಶಿಕ್ಷೆಯನ್ನು ದಿನಾಂಕ:12.08.2022 ರಂದು ವಿಧಿಸಿ ಅನುಪಾಲನಾ ವರದಿಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ ದಿನಾಂಕ:07.10.2022 ರಂದು ಸಲ್ಲಿಸಲಾಗಿರುತ್ತದೆ.

ಬಿ.ಎಸ್.ಎನ್.ಎಲ್ ನೌಕರರ ಪತ್ತಿನ ಸಹಕಾರ ಸಂಘಕ್ಕೆ ದಿನಾಂಕ:30.11.2017 ರಂದು ಮಂಜೂರಾಗಿರುವ ರೂ.2.50 ಕೋಟಿ ನಗದು ನಂಬಿಕೆ ಸಾಲ ಬ್ಯಾಂಕಿನ ಬೈಲಾ ಅವಕಾಶ ಹಾಗೂ ಸಾಲ ಮಂಜೂರು ಮಾಡುವ ಸಂಬಂಧ ಬ್ಯಾಂಕು ರೂಪಿಸಿಕೊಂಡಿರುವ ಸಾಲದ ಉಪನಿಯಮಗಳ ರೀತ್ಯಾ ಮಂಜೂರು ಮಾಡಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಸಾಲ ನವೀಕರಿಸಿಕೊಂಡು ಬರಲಾಗಿದೆ. ದಿನಾಂಕ:01.04.2017 ರಿಂದ 31.03.2021 ರವರೆಗೆ ಸಂಘವು ಬ್ಯಾಂಕಿನ ಕೋಲಾರ ಶಾಖೆಯಲ್ಲಿ ವ್ಯವಹಾರ ನಡೆಸಿರುತ್ತದೆ. ನಂತರದಲ್ಲಿ ವ್ಯವಹಾರ ಸ್ಥಗಿತಗೊಂಡಿದ್ದು ಸಾಲ ವಸೂಲಾತಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ಬ್ಯಾಂಕಿನವರು ರೂ.2,66,79,060/- ಗಳ ವಸೂಲಾತಿಗಾಗಿ ದಾವೆ ಹೂಡಲಾಗಿರುತ್ತದೆ.

**ಪ್ರಕರಣ-4:** ಡಿಸಿಸಿ ಬ್ಯಾಂಕಿನ ಕೋಲಾರ ಮತ್ತು ಕೆ.ಜಿ.ಎಫ್ ಶಾಖೆಗಳಲ್ಲಿ 2020-21 ಮತ್ತು 2021-22ನೇ ಹಣಕಾಸು ವರ್ಷದಲ್ಲಿ ಬ್ಯಾಂಕಿನ ಕೋಲಾರ ಶಾಖೆಯಲ್ಲಿ ರೂ.1.49 ಕೋಟಿ ಮತ್ತು ಕೆ.ಜಿ.ಎಫ್. ಶಾಖೆಯಲ್ಲಿ ರೂ.4.17 ಕೋಟಿ ಬಡ್ಡಿ ಸಹಾಯಧನ ಹಣ ಬಡ್ಡಿ ಆದಾಯದ ಖಾತೆಗೆ ಹೊಂದಾಣಿಕೆ ಮಾಡದೆ ಎಸ್.ಹೆಚ್.ಜಿ ಸಂಘಗಳ ಸಾಲದ ಅಸಲಿಗೆ ಹೊಂದಾಣಿಕೆ ಮಾಡಿ ಬಡ್ಡಿ ಸೋರಿಕೆಯಾಗಿರುವುದು ಬ್ಯಾಂಕಿನ ಆಂತರಿಕ ಪರಿವೀಕ್ಷಣೆಯಲ್ಲಿ ಬೆಳಕಿಗೆ ಬಂದಿರುತ್ತದೆ. ಬ್ಯಾಂಕಿನ ಚಿಂತಾಮಣಿ ಶಾಖೆಯಲ್ಲಿ ಎಸ್.ಹೆಚ್.ಜಿ ಸಾಲಗಳಿಗೆ ಸರ್ಕಾರದಿಂದ ಬಡ್ಡಿ ಕ್ಲೈಂ ಮೊತ್ತ ಬರಬೇಕಾದದ್ದು ಎಂಬುದಾಗಿ ಕೃತಕ ನಮೂದು ಸೃಷ್ಟಿಸಿ ರೂ.2.23 ಕೋಟಿಯಷ್ಟು ಹಣವನ್ನು 03 ಸಹಕಾರ ಸಂಘಗಳಾದ ಬೊಮ್ಮೆಪಲ್ಲಿ, ಯನಮಲಪಾಡಿ ಮತ್ತು ಅಂಕಾಲಮಡಗು ಸಂಘಗಳಿಂದ ಬಾಕಿ ಇದ್ದ ಸಾಲದ ಅಸಲಿಗೆ ಹೊಂದಾಣಿಕೆ ಮಾಡಿ ಬ್ಯಾಂಕಿನ ದ್ರವ್ಯ ಸಂಪನ್ಮೂಲಗಳನ್ನು ದುರುಪಯೋಗಪಡಿಸಿಕೊಂಡಿರುವುದು ಪರಿವೀಕ್ಷಣೆಯಿಂದ ಬೆಳಕಿಗೆ ಬಂದಿರುತ್ತದೆ.

ಈ ಸಂಬಂಧ ಬ್ಯಾಂಕಿನ ಕೋರಿಕೆಯ ಮೇರೆಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಡಿ ಶಾಸನಬದ್ಧ ಪರಿವೀಕ್ಷಣೆಗೆ ದಿನಾಂಕ:14.08.2024 ರಂದು ಆದೇಶವಾಗಿರುತ್ತದೆ. ಈ ಆದೇಶಕ್ಕೆ ಬ್ಯಾಂಕಿನ ಸದಸ್ಯ ಸಹಕಾರ ಸಂಘವಾದ ಬೇತಮಂಗಲ ವಿ.ಎಸ್.ಎಸ್.ಎನ್ ನಿಂದ ಗೌರವ ಉಚ್ಛ ನ್ಯಾಯಾಲಯದಲ್ಲಿ ರಿಟ್ ದಾಖಲಿಸಲಾಗಿದ್ದು, ರಿಟ್ ಅರ್ಜಿ ಸಂಖ್ಯೆ:23510/2024ಕ್ಕೆ ದಿನಾಂಕ:29.08.2024 ರಂದು ಗೌರವ ಉಚ್ಛ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ.

ಬ್ಯಾಂಕಿನ ದ್ರವ್ಯ ಸಂಪನ್ಮೂಲಗಳ ದುರ್ಬಳಕೆಗೆ ಕಾರಣರಾದ ಕೋಲಾರ, ಕೆ.ಜಿ.ಎಫ್ ಮತ್ತು ಚಿಂತಾಮಣಿ ಶಾಖೆಗಳ ವ್ಯವಸ್ಥಾಪಕರು ಮತ್ತು ಮೇಲ್ವಿಚಾರಕರು ಸೇರಿ 07 ಜನ ಸಿಬ್ಬಂದಿಯನ್ನು ಶಿಸ್ತು ವಿಚಾರಣೆಗೆ ಕಾಯ್ದಿರಿಸಿ ಸೇವೆಯಿಂದ ಕ್ರಮವಾಗಿ ದಿನಾಂಕ:23.10.2024, ದಿನಾಂಕ:25.10.2024 ಮತ್ತು ದಿನಾಂಕ:06.11.2024 ರಂದು ಅಮಾನತ್ತುಗೊಳಿಸಲಾಗಿರುತ್ತದೆ. ಅಮಾನತ್ತು ಆದೇಶದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:29548/2024, 29083/2024 ಮತ್ತು 30277/2024 ರಂತೆ ದಾವೆ ಹೂಡಿ ಮಧ್ಯಂತರ ತಡೆಯಾಜ್ಞೆ ಪಡೆದಿರುತ್ತಾರೆ. ಈ ಸಿಬ್ಬಂದಿಗಳನ್ನು ಅವರು ಈ ಹಿಂದೆ ಕೆಲಸ ನಿರ್ವಹಿಸುತ್ತಿದ್ದ ಸ್ಥಳದಿಂದ ಬೇರೆ ಸ್ಥಳಕ್ಕೆ ನಿಯುಕ್ತಿಗೊಳಿಸಲಾಗಿದೆ. ಗೌ|| ಉಚ್ಛ ನ್ಯಾಯಾಲಯದ ಆದೇಶವನ್ನು ನಿರೀಕ್ಷಿಸಲಾಗಿದೆ.

ದುರ್ಬಳಕೆಯಾಗಿದ್ದ ಮೊತ್ತದ ಪೈಕಿ ರೂ.186.19 ಲಕ್ಷ ವಸೂಲಿಯಾಗಿದ್ದು, ಶಾಖಾವಾರು ವಿವರ ಈ ಕೆಳಗಿನಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಶಾಖೆಯ ಹೆಸರು | ದುರ್ಬಳಕೆಯಾಗಿರುವ ಮೊತ್ತ | ವಸೂಲಾಗಿರುವ ಮೊತ್ತ | ವಸೂಲಿಗೆ ಬಾಕಿ ಇರುವ ಮೊತ್ತ |
|---|---|---|---|---|
| 1 | ಕೋಲಾರ | 149.00 | 56.77 | 92.23 |
| 2 | ಕೆ.ಜಿ.ಎಫ್ | 417.00 | 44.00 | 373.00 |
| 3 | ಚಿಂತಾಮಣಿ | 223.00 | 85.42 | 137.58 |
| | ಒಟ್ಟು | 789.00 | 186.19 | 602.81 |

**ಪ್ರಕರಣ-5:** 2023-24ನೇ ಸಾಲಿನಲ್ಲಿ ಬ್ಯಾಂಕಿನ ಗುಡಿಬಂಡೆ ಶಾಖೆಯಲ್ಲಿ ನಡೆದಿರುವ ರೂ.196.41 ಲಕ್ಷಗಳ ನಗದು ಶಿಲ್ಕು ಹಣ ದುರುಪಯೋಗದ ಪ್ರಕರಣ ಬ್ಯಾಂಕಿನ ಆಂತರಿಕ ಪರಿವೀಕ್ಷಣೆಯಲ್ಲಿ ಬೆಳಕಿಗೆ ಬಂದಿದ್ದು 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ಶಾಸನಬದ್ಧ ವಿಚಾರಣೆಗೆ ದಿನಾಂಕ:12.03.2024 ರಂದು ಆದೇಶವಾಗಿರುತ್ತದೆ. ವಿಚಾರಣಾಧಿಕಾರಿಯಾಗಿ ಶ್ರೀ ನವೀನ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪ ವಿಭಾಗ ರವರನ್ನು ನೇಮಿಸಲಾಗಿದ್ದು ಇವರು ವಿಚಾರಣಾ ವರದಿಯನ್ನು ದಿನಾಂಕ:18.09.2024 ರಂದು ಸಲ್ಲಿಸಿದ್ದು, ಹಣ ದುರುಪಯೋಗವಾಗಿರುವುದನ್ನು ದೃಢಪಡಿಸಿರುತ್ತಾರೆ. ವಿಚಾರಣಾ ವರದಿಯ ಮೇಲೆ ಬ್ಯಾಂಕು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಶಾಸನಬದ್ಧ ನಿರ್ದೇಶನಗಳನ್ನು ನೀಡಿ ದಿನಾಂಕ:16.11.2024 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 68ರಡಿ

ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ರವರು ಆದೇಶ ಹೊರಡಿಸಿರುತ್ತಾರೆ. ಹಣ ದುರುಪಯೋಗದಲ್ಲಿ ಭಾಗಿಯಾಗಿದ್ದ ಶ್ರೀ ಎನ್. ಸುವರ್ಣಮೂರ್ತಿ, ವ್ಯವಸ್ಥಾಪಕರು ಮತ್ತು ಶ್ರೀ ಅನಿಲ್ ಕುಮಾರ್ ಬಿ.ಎ. ನಗದು ಗುಮಾಸ್ತರು ಇವರನ್ನು ಶಿಸ್ತು ವಿಚಾರಣೆಗೆ ಕಾಯ್ದಿರಿಸಿ ಸೇವೆಯಿಂದ ದಿನಾಂಕ:17.02.2024 ರಂದು ಅಮಾನತ್ತುಗೊಳಿಸಲಾಗಿದ್ದು, ಇವರ ಆಂತರಿಕ ವಿಚಾರಣೆ ಪೂರ್ಣಗೊಂಡಿದ್ದು ಶಿಸ್ತು ಪ್ರಾಧಿಕಾರ ಇವರ ವಿರುದ್ಧ ಹೊರಿಸಿದ್ದ ಎಲ್ಲಾ ಆರೋಪಗಳು ರುಜುವಾತಾಗಿರುತ್ತವೆ. ಆಪಾದಿತ ನೌಕರರಿಗೆ ಅವರ ಲಿಖಿತ ಹೇಳಿಕೆ ಸಲ್ಲಿಸಲು ಅವಕಾಶ ನೀಡಿ, ಲಿಖಿತ ಹೇಳಿಕೆಯನ್ನು ಪಡೆದು ಶ್ರೀ ಎನ್. ಸುವರ್ಣಮೂರ್ತಿ, ವ್ಯವಸ್ಥಾಪಕರು ಮತ್ತು ಶ್ರೀ ಅನಿಲ್ ಕುಮಾರ್ ಬಿ.ಎ., ನಗದು ಗುಮಾಸ್ತರು ಇವರನ್ನು ಸೇವೆಯಿಂದ ವಜಾಗೊಳಿಸಿ, ದಿನಾಂಕ: 12-03-2025 ರಂದು ಆದೇಶಿಸಲಾಗಿರುತ್ತದೆ. ಆಪಾದಿತರ ವಿರುದ್ಧ ಗುಡಿಬಂಡೆ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣವನ್ನು ದಿನಾಂಕ:16.02.2024 ರಂದು ದಾಖಲಿಸಿದ್ದು ಮೊಕದ್ದಮೆ ಸಂಖ್ಯೆ 0026/2024 ಆಗಿರುತ್ತದೆ. ದುರುಪಯೋಗದ ಮೊತ್ತ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 69 ರಡಿ ದಿನಾಂಕ:13.03.2024 ರಂದು ದಾವೆ ಹೂಡಲಾಗಿದೆ. ಪ್ರತಿವಾದಿಗಳಾದ ಶ್ರೀ ಎನ್. ಸುವರ್ಣಮೂರ್ತಿ ಹಾಗೂ ಅವರ ಪತ್ನಿ ಶ್ರೀಮತಿ ಜಿ.ಕೆ.ಗೀತಾರವರ ಹೆಸರಿನಲ್ಲಿರುವ ಸ್ಥಿರಾಸ್ತಿ ಮತ್ತು ಶ್ರೀ ಅನಿಲ್ ಕುಮಾರ್ ಬಿ.ಎ ರವರ ಹೆಸರಿನಲ್ಲಿರುವ ಸ್ಥಿರಾಸ್ತಿಯ ಜಪ್ತಿ ಪೂರ್ವ ಆದೇಶವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 103ರಡಿ ದಿನಾಂಕ:13.03.2024 ರಂದು ಹೊರಡಿಸಲಾಗಿದೆ ಹಾಗೂ ಜಪ್ತಿ ಪೂರ್ವ ಆದೇಶವನ್ನು ಸ್ಥಿರೀಕರಿಸಿ ದಿನಾಂಕ:28-05-2025 ರಂದು ಆದೇಶಿಸಲಾಗಿದೆ.

ರೂ.196.41 ಲಕ್ಷಗಳ ದುರುಪಯೋಗದ ಮೊತ್ತದ ಪೈಕಿ ರೂ.20.00 ಲಕ್ಷ ನಗದು ಹಣ ಬ್ಯಾಂಕಿಗೆ ಶ್ರೀ ಅನಿಲ್ ಕುಮಾರ್ ಬಿ.ಎ. ರವರಿಂದ ದಿನಾಂಕ:11.02.2025 ರಂದು ಮರುಪಾವತಿಯಾಗಿರುತ್ತದೆ.

**ಪ್ರಕರಣ-6:** ಬ್ಯಾಂಕಿನ ಬಾಗೇಪಲ್ಲಿ ಶಾಖೆಯ ಪ್ರಭಾರ ವ್ಯವಸ್ಥಾಪಕರಾದ ಶ್ರೀ ಸಿ.ಎನ್.ಚೇತನ್ ರವರ ಕರ್ತವ್ಯ ನಿರ್ವಹಣೆಯಲ್ಲಿನ ಲೋಪಗಳ ಬಗ್ಗೆ ದೂರುದಾರರಾದ ಶ್ರೀ ಟಿ.ಎಸ್.ಪ್ರತಾಪ್ ಎಂಬುವವರು ದಿನಾಂಕ:18.10.2024 ರಂದು ಇಲಾಖೆಗೆ ದೂರು ಸಲ್ಲಿಸಿ ಶಾಖೆಯಿಂದ ರೈತರಿಗೆ ಮತ್ತು ಸ್ವ-ಸಹಾಯ ಗುಂಪುಗಳಿಗೆ ಮಂಜೂರಾದ ಕೆ.ಸಿ.ಸಿ. ಮತ್ತು ಎಸ್.ಹೆಚ್.ಜಿ ಸಾಲಗಳನ್ನು ವಿತರಣೆ ಮಾಡದೆ ದುರುಪಯೋಗಪಡಿಸಿಕೊಂಡಿರುತ್ತಾರೆಂದು ಹಾಗೂ ದಿನಾಂಕ:07.09.2021 ರಂದು ರೂ.10.00 ಲಕ್ಷ ಬೋಗಸ್ ಚಲನ್ ಹಾಕಿ ನಂತರ ಹಣ ಡ್ರಾ ಮಾಡಿರುತ್ತಾರೆ ಹಾಗೂ ಅವರ ತಾಯಿ ಮತ್ತು ಭಾವ-ಮೈದುನನ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿ ಡ್ರಾ ಮಾಡಿರುತ್ತಾರೆ ಎಂದು ಆರೋಪಿಸಿರುತ್ತಾರೆ. ಈ ಆರೋಪದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು ದಿನಾಂಕ:29.10.2024 ರಂದು ನಿಯೋಜಿಸಲಾಗಿರುತ್ತದೆ. ಸದರಿಯವರು ದಿನಾಂಕ:27.02.2025 ರಂದು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಯಾವುದೇ ಆರೋಪವು ಸಾಬೀತಾಗಿರುವುದಿಲ್ಲ.

**ಪ್ರಕರಣ-7:** ಬ್ಯಾಂಕಿನಲ್ಲಿ ಇತ್ತೀಚಿನ ದಿನಗಳಲ್ಲಿ ನಡೆದಿದೆ ಎನ್ನಲಾದ ವ್ಯವಹಾರಗಳ ಕುರಿತು ಶ್ರೀ ಟಿ.ಎಸ್. ಪ್ರತಾಪ್ ಕುಮಾರ್ ರವರ ದೂರು ಅರ್ಜಿ ಹಾಗೂ ದಿನಪತ್ರಿಕೆಗಳಲ್ಲಿ ವರದಿಯಾಗಿರುವ ಅಂಶಗಳನ್ನು ಪರಿಶೀಲಿಸಿ, ನೆಫ್ಟ್ ಮೂಲಕ ವರ್ಗಾವಣೆಯಾಗಿರುವ

ಹಣದ ವ್ಯವಹಾರ, ವಿವಿಧ ರೀತಿಯ ಸಾಲ ವಿತರಣೆ, ಎ.ಟಿ.ಎಂ.ಕಾರ್ಡ್ ವಿತರಣೆ, ಆಂತರಿಕ ನಗದು ವರ್ಗಾವಣೆ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 65ರಡಿ ಪರಿವೀಕ್ಷಣೆ ನಡೆಸಲು ಶ್ರೀ ನಾಗರಾಜು, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರನ್ನು ದಿನಾಂಕ:29-10-2025 ರಂದು ನೇಮಿಸಿ ಆದೇಶಿಸಲಾಗಿರುತ್ತದೆ. ಪರಿವೀಕ್ಷಣೆಯು ಚಾಲ್ತಿಯಲ್ಲಿರುತ್ತದೆ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ನಿ., ಕೋಲಾರ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64 ರಡಿ ಶಾಸನಬದ್ಧ ವಿಚಾರಣೆ ಹಾಗೂ ಕೆಲವು ಪ್ರಕರಣಗಳಲ್ಲಿ ಕಲಂ 65 ರಡಿ ಶಾಸನಬದ್ಧ ಪರಿವೀಕ್ಷಣೆ ನಡೆಸಿ ಸಂಘಕ್ಕೆ ಆಗಿರುವ ನಷ್ಟ ವಸೂಲಾತಿಗೆ ಕಲಂ 69 ರಡಿ ರೂ.2.03 ಕೋಟಿ ಮತ್ತು ಶೇ.18 ರ ಬಡ್ಡಿ ವಸೂಲಾತಿಗೆ ಪ್ರಕರಣವನ್ನು ದಾಖಲೆ ಮಾಡಿಕೊಳ್ಳಲಾಗಿದ್ದು ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಇನ್ನೂ ಕೆಲವಾರು ಅವ್ಯವಹಾರಗಳು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಹೊಸದಾಗಿ ಕಲಂ 64 ರಡಿ ಶಾಸನಬದ್ಧ ವಿಚಾರಣೆಗೆ ಆದೇಶಿಸಲಾಗಿದ್ದು, ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ಇಲಾಖೆಯಿಂದ ಕೈಗೊಂಡ ಕ್ರಮಗಳ ಹೊರತಾಗಿ ಬ್ಯಾಂಕಿನಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ತನಿಖೆ ನಡೆಸಲು ಲೋಕಾಯುಕ್ತ ಕಛೇರಿಯಿಂದಲೂ ಅನುಮತಿ ಕೋರಿದ್ದರ ಮೇರೆಗೆ, ಬ್ಯಾಂಕಿನ ಆಡಳಿತಾಧಿಕಾರಿಗಳು ದಿನಾಂಕ: 23-05-2025 ರಂದು ಅನುಮತಿ ನೀಡಿದ್ದು, ಲೋಕಾಯುಕ್ತ ಕಛೇರಿಯಲ್ಲಿಯೂ ಸಹ ತನಿಖೆ ಚಾಲ್ತಿಯಲ್ಲಿರುತ್ತದೆ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ನಿ., ಕೋಲಾರ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ನಡೆದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಖಾಸಗಿಯವರಿಂದ ದಾಖಲಿಸಲ್ಪಟ್ಟ ಕ್ರಿಮಿನಲ್ ಫಿರ್ಯಾದಿನ ವಿರುದ್ಧ ಬ್ಯಾಂಕಿನ ಅಧಿಕಾರಿಗಳು/ಸಿಬ್ಬಂದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಪಿಟಿಷನ್ ನಂ. 3149/2025, 3155/2025, 3157/2025, 3170/2025, 3232/2025, 3239/2025, 3241/2025 ದಾವೆ ದಾಖಲಿಸಿ ತಡೆಯಾಜ್ಞೆ ಪಡೆದಿದ್ದರು. ಸದರಿ ದಾವೆಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:20-02-2026ರಂದು ವಜಾಗೊಳಿಸಿ ಆದೇಶಿಸಿರುತ್ತದೆ. ಖಾಸಗಿಯವರಿಂದ ದಾಖಲಿಸಲ್ಪಟ್ಟ ಕ್ರಿಮಿನಲ್ ಫಿರ್ಯಾದಿನ ವಿಚಾರಣೆಗಳು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಚಾರಣಾ ಹಂತದಲ್ಲಿರುತ್ತವೆ.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕ್ ನಿ., ಕೋಲಾರ ಬ್ಯಾಂಕಿನ ವಿವಿಧ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿರುವ ವ್ಯಾಜ್ಯಗಳಿಗೆ ಕಂಡಿಕೆವಾರು ಷರಾವನ್ನು ಸಲ್ಲಿಸಲಾಗಿರುತ್ತದೆ. ತಡೆಯಾಜ್ಞೆಯನ್ನು ತೆರವುಗೊಳಿಸುವ ಸಲುವಾಗಿ ಅಗತ್ಯ ಮಾಹಿತಿಯನ್ನು ಅಡ್ವೋಕೇಟ್ ಜನರಲ್‌ರವರ ಕಛೇರಿಗೆ ನೀಡಲಾಗಿರುತ್ತದೆ.

**ಸಂಖ್ಯೆ: ಸಿಒ 86 ಸಿಎಲ್‌ಎಸ್ 2026**

(ಸಿದ್ದರಾಮಯ್ಯ)

**ಮುಖ್ಯಮಂತ್ರಿ**